ಹಾಕಿಕೊಂಡು ಮಲಗಿದೆ. ನಾನು ಆತ್ಮಹತ್ಯೆ ಮಾಡಿಕೊಳ್ಳಲು ಬಾಗಿಲು ಹಾಕಿಕೊಂಡೆನೆಂದು ಭಾವಿಸಿ, ಎಲ್ಲಿ ತನ್ನ ಮೇಲೆ ಕೊಲೆ ಕೇಸು ಬಂದು ಬಿಡುವುದೋ ಎಂದು ಹೆದರಿ, 'ನಾನು ಆಂಟಿಯ ಮನೆಗೆ ಹೋಗಿ ಮಲಗಿಕೊಳ್ಳುತ್ತೇನೆ' ಎಂದು ಜೋರಾಗಿ ಹೇಳಿ ಹೊರಗಿನ ಬಾಗಿಲು ತೆಗೆದ. 'ನೀನ್ಯಾಕೆ ಹೋಗುತ್ತೀಯಾ, ಇದು ನಿನ್ನದೇ ಮನೆ. ನಾನೇ ಹೋಗುತ್ತೇನೆ ಬೇಕಾದರೆ. ನೀನು ಅವಳನ್ನೇ ಇಟ್ಟುಕೋ...' ಎಂದು ನಾನೂ ಮನೆಯಿಂದ ಹೊರಬಂದೆ. ಅಪ್ಪನಿಗೆ ಫೋನ್ ಮಾಡಿದೆ. ಮಧ್ಯರಾತ್ರಿ ಎರಡು ಗಂಟೆ! ಅಪ್ಪ ಹೌಹಾರಿದರು. 'ಈ ಅಪವೇಳೆಯಲ್ಲಿ ಹೊರಗೆ ಬರಬೇಡ, ಮನೆಯೊಳಗೆ ಕುಳಿತಿರು, ಬೆಳಗ್ಗೆ ಬಂದು ಕರೆದೊಯ್ಯುತ್ತೇನೆ...' ಎಂದರು. ಅವರು ಅವನಿಗೆ ಎಷ್ಟು ಫೋನು ಮಾಡಿದರೂ ತೆಗೆಯಲೇ ಇಲ್ಲ. ಮತ್ತೆ ನನಗೇ ಫೋನ್ ಮಾಡಿ, ಕೊಡುವಂತೆ ಹೇಳಿದರು. ಅವನೋ ಈಸಿಕೊಳ್ಳದೇ ಅಪ್ಪನಿಗೆ ಕೇಳುವಂತೆಯೇ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಲಾರಂಭಿಸಿದ. ಅವರು ದೌಡಾಯಿಸಿ ಓಡಿಬಂದರು.

ಅಪ್ಪ ಅವನ ಚಿಕ್ಕಪ್ಪನ ಜೊತೆ ಮಾತಾಡಿದರು. 'ಹುಡುಗ ಬಾಲ್ಯದಿಂದ ಅಕ್ಕತಂಗಿಯರ ಜೊತೆ ಬೆಳೆದಿಲ್ಲವಾದ್ದರಿಂದ ಹೆಣ್ಣುಮಕ್ಕಳ ಬೆಲೆ ತಿಳಿದಿಲ್ಲ. ಮನಃಶಾಸ್ತ್ರಜ್ಞರ ಬಳಿ ಇಬ್ಬರನ್ನೂ ಕರೆದೊಯ್ದು, ಫ್ಯಾಮಿಲಿ ಕೌನ್ಸೆಲಿಂಗ್ ಮಾಡಿಸೋಣ...' ಎಂದರೆ, ಅವರಾದರೂ ಏನನ್ನಬೇಕು, 'ನಮ್ಮ ಹುಡುಗನಿಗೆ ಏನೂ ಆಗಿಲ್ಲ, ನಿಮ್ಮ ಮಗಳಿಗೇ ಹುಚ್ಚು ಹಿಡಿದಿರೋದು, ಸರಿ ಮಾಡಿಸಿಕೊಳ್ಳಿ...' ಅಪ್ಪ ತಲೆ ಮೇಲೆ ಕೈಹೊತ್ತು ಕುಳಿತರು.

ಎಂಥ ನೋವಾಯಿತು ಗೊತ್ತಾ ನನಗೆ. ಹಾಗೆ ನೋಡಿದರೆ ಎಂಥ ಪ್ರತಿಷ್ಠಿತ ಕುಟುಂಬ ನಮ್ಮದು. ಅವನದ್ದೇ ಅಬ್ಬೇಪಾರಿ ಕುಟುಂಬ. ಅಂಥವರು ನಮ್ಮ ಬಗ್ಗೆಯೇ ಚೀಪಾಗಿ ಮಾತಾಡಿದ್ದರಿಂದ ಆತ್ಮಹತ್ಯೆ ಮಾಡಿಕೊಂಡುಬಿಡಬೇಕೆನಿಸುವಂತಾಯಿತು. ಬಿಕ್ಕಿಬಿಕ್ಕಿ ಅತ್ತೆ. ರಸ್ತೆಯಲ್ಲಿ ನಡೆದು ಹೋಗುತ್ತಿದ್ದವರೆಲ್ಲ ತಿರುತಿರುಗಿ ನೋಡುತ್ತಿದ್ದರು. 'ಇದೊಂದು ಸಲ ಕ್ಷಮಿಸಿ, ಮತ್ತೆಂದೂ ಇಂಥ ತಪ್ಪು ಮಾಡುವುದಿಲ್ಲ. ದಯವಿಟ್ಟು ಮನೆಗೆ ಕರೆದುಕೊಂಡು ಹೋಗಿ' ಎಂದು ಅಂಗಲಾಚಿದೆ. ಅವನು ಕೈಕೊಸರಿ ಹೋದಾಗ ಓಡಿಹೋಗಿ ಅವನ ಕಾಲನ್ನು ತಬ್ಬಿ ಹಿಡಿದೆ. ಅಷ್ಟರಲ್ಲಿ ಅವನ ಕಡೆಯವರೆಲ್ಲ ಪರಾರಿಯಾಗಿದ್ದರು. 'ನನ್ನದೇನೂ ಅಭ್ಯಂತರ ಇಲ್ಲ. ಪೇರೆಂಟ್ಸ್ ಜೊತೆ ಮಾತಾಡಿ...' ಎಂದವನೇ ಅವನೂ ನಾಪತ್ತೆಯಾಗಿಹೋದ. ಹೋಗಿ ನೋಡಿದರೆ ಎರಡೂ ಮನೆಗಳಿಗೆ ಬೀಗ ಜಡಿದು ಎತ್ತಲೋ ಹೋಗಿಬಿಟ್ಟಿದ್ದರು. ಅಥವ ಬೀಗ ಹಾಕಿಸಿಕೊಂಡು ಒಳಗಡೆಯೇ ಇದ್ದರೋ ಗೊತ್ತಾಗಲಿಲ್ಲ. ಅಪ್ಪ, 'ಇವರು ನಮ್ಮ ಯೋಗ್ಯತೆಗೆ, ಸಂಸ್ಕಾರಕ್ಕೆ ತಕ್ಕನಾದ ಜನರಲ್ಲ. ಮೆಜೆಸ್ಟಿಕ್ ಕಳ್ಳರಂತೆ ಒಬ್ಬರ ಮೇಲೊಬ್ಬರು ತೋರಿಸಿ ಹಾರಿಕೊಂಡುಹೋಗುತ್ತಿದ್ದಾರೆ. ಬಿಟ್ಟುಬಿಡಮ್ಮ, ಬೇರೆ ಮದುವೆ ಮಾಡುತ್ತೇನೆ...' ಎಂದರು.

'ಬೇರೆ ಮದುವೆ...' ಎಂಬ ವಾಕ್ಯವನ್ನು ಅರಗಿಸಿಕೊಳ್ಳಲು ನನಗೆ ಸಾಧ್ಯವಾಗಲಿಲ್ಲ. 'ಬದುಕಿದರೆ ಅವನ ಜೊತೆಯೇ ಬದುಕುತ್ತೇನೆ, ಇಲ್ಲವಾದಲ್ಲಿ ಸತ್ತು ಹೋಗುತ್ತೇನೆ...' ಎಂದೆ. 'ಸಾಯುವಂಥ ಮಾತು ಏಕೆ ಆಡುತ್ತೀ. ನೀನು ಚೆನ್ನಾಗಿರಲಿ ಎಂದು ತಾನೇ ನಾವೆಲ್ಲ ಇಷ್ಟು ಕಷ್ಟಪಡುತ್ತಿರುವುದು. ಮದುವೆಯೊಂದೇ ಜೀವನವಲ್ಲ. ಮದುವೆಯಾಗದ ಎಷ್ಟು ಜನ ಭೂಮಿ ಮೇಲಿಲ್ಲ. ಅವರೆಲ್ಲ ನಿನ್ನಂತೆಯೇ ಸಾಯುವ ತೀರ್ಮಾನ ಮಾಡಿದ್ದಾರೇನು? ನೀನು ನೋಡಿದರೆ, ಹಿಂದಿನ ಜನ್ಮದಲ್ಲಿ ಯಾವುದೋ ದೇಶದ ಮಹಾರಾಣಿಯಾಗಿದ್ದವಳಂತೆ ಇದ್ದೀಯಾ. ನಾವು ಕೂಡ ಹಾಗೇ ಸಾಕಿದ್ದೇವೆ. ಎಷ್ಟು ಜನ ವಿಕಾರವಾಗಿರುವವರು, ವಿಕಲಾಂಗ ಚೇತನರು ಭೂಮಿಮೇಲಿಲ್ಲ. ಅವರೆಲ್ಲ ನಿನ್ನಂತೆಯೇಸಾಯುವ ಮಾತಾಡಿದ್ದಾರೇನು? ಆತ್ಮಹತ್ಯೆ ಹೇಡಿಗಳ ಲಕ್ಷಣ. ಬದುಕಿ ತೋರಿಸಬೇಕು. ಮನುಷ್ಯನಿಗೆ ಮನಸ್ಸು ಮುಖ್ಯ, ಮುಖದ ಸೌಂದರ್ಯವಲ್ಲ... ಅವನೋ ಯಾವುದೇ ಸಂಸ್ಕಾರವಿಲ್ಲದೆ ಒಳ್ಳೆ ರಾಕ್ಷಸನಂತೆ ವರ್ತಿಸುತ್ತಿದ್ದಾನೆ. ನಮಗೆ ಪ್ರೀತಿ, ಗೌರವ ಸಿಗದ ಕಡೆ ನಾವು ಹೋಗಿ ಬದುಕಲು ಸಾಧ್ಯವಿಲ್ಲ. ಅಷ್ಟಕ್ಕೂ ಇದು ಒಂದು ಎರಡು ದಿನದ ಬದುಕಲ್ಲ. ಕನಿಷ್ಟ ಐವತ್ತು ವರ್ಷದ ಸಹಜೀವನ. ದಿನಾಲೂ ಸಾಯುವುದಕ್ಕಿಂತ, ಒಮ್ಮೆ ಅವನು ನಮ್ಮ ಪಾಲಿಗೆ ಸತ್ತುಹೋದನೆಂದು ಬಿಟ್ಟುಬಿಡು...' ಎಂದವರು, ಅನೇಕ ಮೋಟಿವೇಷನಲ್ ಭಾಷಣಗಳನ್ನು ಕೇಳಿಸುತ್ತಿದ್ದರು. ಆದರೆ ನನಗೇ ಯಾಕೋ ಅವುಗಳ ಬಗ್ಗೆ ಆಸಕ್ತಿ ಇರಲಿಲ್ಲ. ಆ ಮಾತುಗಳ್ಯಾವುವೂ ಮನಸ್ಸೊಳಕ್ಕೂ ಹೋಗುತ್ತಿರಲಿಲ್ಲ. ಆಗಲೇ ಡಾ. ಸಂಧ್ಯಾರ ಬಳಿ ಕರೆದೊಯ್ದದ್ದು.

ಮನಸ್ಸನ್ನು ತಿಳಿಗೊಳಿಸಲೆಂದೇ ಸಿನಿಮಾಕ್ಕೋ ದೇವಸ್ಥಾನಕ್ಕೋ ಕರೆದೊಯ್ದರೆ ಅಲ್ಲಿಯೂ ನನಗೆ ಅವನದೇ ಧ್ಯಾನ. ದೇವರೇ ನನಗೆ ಅವನನ್ನೇ ದಯಪಾಲಿಸು ಎಂದು ಪರಿಪರಿಯಾಗಿ ಬೇಡಿಕೊಳ್ಳುತ್ತಿದ್ದೆ. ದಿನಾಲೂ ನೂರಾರು ಹರಕೆ ಹೊತ್ತು ತೀರಿಸುತ್ತಿದ್ದೆ. ನನ್ನ ಜೀವನವನ್ನು ಅವನೇ ತುಂಬುತ್ತಾನೆಂದು ದೇವರು ಪ್ರತಿದಿನವೂ ಬಲಗಡೆಯೇ ಹೂವು ಕೊಡುತ್ತಿತ್ತು. ಪೂಜಾರರು, 'ನೀವು ದೇವರ ಮಗಳೇ ಇರಬೇಕು, ಯಾರಿಗೂ ಸಲೀಸಾಗಿ ಹೂ ಕೊಡದ ದೇವರು ನಿಮ್ಮೊಬ್ಬರಿಗೇ ಹೀಗೆ ದಿನಾಲೂ ಹೂ ಕೊಡುವುದು...' ಎನ್ನುತ್ತಿದ್ದರು. ಹಾಗಾಗಿ ನಾನೂ ಅವನೇ ಬಂದೇಬರುತ್ತಾನೆಂದು ಬಲವಾಗಿ ನಂಬಿಬಿಟ್ಟಿದ್ದೆ.

ಒಂದು ದಿನ ಡೈವೋರ್ಸ್ ನೋಟೀಸು ರಿಜಿಸ್ಟರ್ ಪೋಸ್ಟಿನಲ್ಲಿ ಮನೆಗೆ ಬಂದಾಗ ಆಕಾಶವೇ ಕಳಚಿಬಿದ್ದಂತೆ ಕಮರಿಹೋದೆ. ಗಳಗಳನೆ ಅತ್ತುಬಿಟ್ಟೆ. 'ಅಪ್ಪಾ, ನನಗೆ ಅವನು ಬೇಕೇಬೇಕು. ಹೇಗಾದರೂ ಮಾಡಿ ಅವನನ್ನು ತಂದುಕೊಡಿ. ಅವನಿಲ್ಲದೇ ನಾನು ಬದುಕಿರಲಾರೆ. ಅವನ ಮನೆಯ ಚಪ್ಪಲಿ ಬಿಡುವಲ್ಲಿ ಬೇಕಾದರೂ ಬದುಕಿರುತ್ತೇನೆ...' ಎಂದು ಆಕಾಶ–ಭೂಮಿ ಒಂದಾಗುವಂತೆ ಆಲಾಪಿಸಿದೆ. ಅಪ್ಪ–ಅಮ್ಮನೂ ನನಗೆ ಮುಗಿಬಿದ್ದು ಅತ್ತರು.

'ಇಲ್ಲ ಮಗಳೇ, ಅವನಾಗಿಯೇ ಬರುತ್ತೇನೆ ಎಂದರೂ ನೀನೇ ಬೇಡ ಎನ್ನಬೇಕು. ಹೆಣ್ಣುಮಕ್ಕಳಿಗೆ ಎಷ್ಟೊಂದು ಸ್ವಾತಂತ್ರ್ಯವಿದೆ ಈಗ. ಮದುವೆಗೆ ಮೊದಲು ಮೂರು ಸಲ ಕೇಳಿದ್ದೇನೆ ಅವನಿಗೆ. ಅವನು ಒಪ್ಪಿದ ಮೇಲೆಯೇ ತಾನೇ ನಾವು ಮುಂದುವರೆದದ್ದು? ಅವನಿಗೆ ಇನ್ನೊಬ್ಬರ ಜೊತೆ ಅಕ್ರಮ ಸಂಬಂಧವಿದ್ದರೆ, ನೀನು ಎಷ್ಟೇ ಚೆನ್ನಾಗಿದ್ದರೂ ನಿನ್ನಲ್ಲಿ ಹುಳುಕನ್ನೇ ಕಾಣಲು ಪ್ರಯತ್ನಿಸುತ್ತಾನೆ. ನಿನ್ನಂಥ ಗಟ್ಟಿಗಿತ್ತಿಯನ್ನು ಹಳ್ಳಿಗುಗ್ಗು ಎನ್ನುತ್ತಾನಲ್ಲ... ಇನ್ನು ಹೇಗೆ ನಿನ್ನನ್ನು ಬೆಳೆಸಬೇಕಿತ್ತು? ಇಲ್ಲ, ನೀನು ಪುಟಿದೇಳಬೇಕು. ಬಾ. ಓದು. ಐಎಎಸ್ಸೋ, ಐಪಿಎಸ್ಸೋ ಮಾಡು. ನಿನಗೆಲ್ಲ ಸಪೋರ್ಟ್ ಮಾಡುತ್ತೇನೆ. ಆ ದುಷ್ಟರನ್ನೆಲ್ಲ ಮಟ್ಟಹಾಕುವಿಯಂತೆ...' ಎಂದು ಹುರಿದುಂಬಿಸುತ್ತಿದ್ದರು. ಹೌದು. ಅವರು ಹೇಳಿದಾಗ, 'ನಿಜಕ್ಕೂ ಹಾಗೇ ಮಾಡಬೇಕು, ಅವರನ್ನೆಲ್ಲಾ ಮೆಟ್ಟಿನಿಲ್ಲಬೇಕು. ನಾನು ಅವನ ಕಾಲು ಹಿಡಿದು ಅಂಗಲಾಚಿ ಬೇಡಿಕೊಂಡರೂ ಅವನಿಗೆ ಕರುಣೆ ಬರಲಿಲ್ಲವಲ್ಲ, ಅವನಿಗೇ ಮೇಲಾಧಿಕಾರಿಯಾಗಿ ಬರಬೇಕು. ಅವನು ಬಂದು ನನ್ನ ಕಾಲು ಹಿಡಿಯಬೇಕು, ಹಾಗೆ ಮಾಡುತ್ತೇನೆ...' ಎಂದು ಎದ್ದುನಿಂತೆ. ಶಹಬ್ಬಾಸ್ ಎಂದು ಬೆನ್ನು ಚಪ್ಪರಿಸಿದರು ಅಪ್ಪ.

'ಇವರಿಗೆ ನೀನು ಬೇಕಿರಲಿಲ್ಲ, ನಿನ್ನ ಆಸ್ತಿ ಬೇಕಿತ್ತು. ನಮ್ಮ ಮನೆ, ನನ್ನ ಉದ್ಯೋಗ ನೋಡಿ, ಕೋಟ್ಯಂತರ ರೂಪಾಯಿ ವರದಕ್ಷಿಣೆ ತರುತ್ತೀಯಾ ಎಂದು ಮದುವೆಯಾಗಿದ್ದಾರೆ. ಅಷ್ಟಕ್ಕೂ ಮದುವೆ ಮೊದಲೇ ಕೇಳಿದೆನಲ್ಲವೇ? ನಮಗೆ ಏನೂ ಬೇಡ ಅಂದರು ತಾನೇ? ಬೇಕು ಎಂದಿದ್ದರೆ ಅಂದೇ ಮದುವೆಯನ್ನು ನಿಲ್ಲಿಸಿಬಿಡುತ್ತಿದ್ದೆ. ತಾವು ಸಾಚಾ ಎಂದು ಬಿಂಬಿಸಿಕೊಳ್ಳಲು ದೇವಸ್ಥಾನದಲ್ಲಿ ಮದುವೆ ಮಾಡಿಕೊಡಿ ಸಾಕು ಎಂದು ನಾಟಕವಾಡಿದರಲ್ಲ. ನೀಚರು... ಅಯ್ಯೋ ಎಂಥ ಪ್ರಪಾತಕ್ಕೆ ಬಿದ್ದುಬಿಟ್ಟೆವಲ್ಲ...' ಎಂದು ಪೇಚಾಡಿದರು.

ಡೈವೋರ್ಸ್ ಅರ್ಜಿ ವಿಚಾರಣೆಗೆ ಬಂದು, ಮೀಡಿಯೇಷನ್‌ಗೆ ಹಾಕಿದಾಗ ದೊಡ್ಡ ಪೌರುಷ ಮೆರೆದವರಂತೆ ಎಲ್ಲರೂ ಮೀಸೆ ತಿರುವಿಕೊಂಡು ಬಂದರು. ಮೀಡಿಯೇಟರ್ ಮಧ್ಯಸ್ಥಿಕೆಯ ಸಾಧ್ಯಾಸಾಧ್ಯತೆಗಳ ಬಗ್ಗೆ ವಿವರಿಸಿದ ಮೇಲೆ, ನನ್ನ ಗಂಡ ಎನ್ನಿಸಿಕೊಂಡ ಪ್ರಾಣಿ, 'ಇವರ ಮನೆಯಲ್ಲಿ ಯಾರಿಗೂ ತಲೆ ಸರಿಯಿಲ್ಲ. ಇವರು ಸೈಕಾಲಜಿ ಪ್ರೊಫೆಸರಂತೆ, ಮೊದಲು ಅವರೇ ಹುಚ್ಚರು. ಇನ್ನು ಹೆಂಡತಿ, ಮಗಳು ಎಲ್ಲರೂ ಹುಚ್ಚರು...' ಎಂದುಬಿಟ್ಟ. ಅಪ್ಪ ಕೂಲಾಗಿ, 'ನಿಜ. ಹುಚ್ಚರಿಗೆ ತಾನು ಬಿಟ್ಟರೆ ಪ್ರಪಂಚದಲ್ಲಿರುವವರೆಲ್ಲ ಹುಚ್ಚರಂತೆಯೇ ಕಾಣುತ್ತಾರೆ...' ಎಂದಾಗ ಅವರೆಲ್ಲರ ಮುಖ ಇಷ್ಟಾಗಿಹೋಯಿತು. ನಾನು ನಡೆದ ಒಂದೊಂದು ಘಟನಾವಳಿಗಳನ್ನು ಹೇಳುತ್ತಾ ಹೋಗುತ್ತಿದ್ದರೆ, ಮೀಡಿಯೇಟರ್ ಮಂತ್ರಮುಗ್ಧರಂತೆ ಕೇಳಿಸಿಕೊಳ್ಳುತ್ತಾ ಹೋಗುತ್ತಿದ್ದರು. ನನಗೇ ಹುಚ್ಚಿ ಎಂದು ಡೈವೋರ್ಸ್ ಅರ್ಜಿಯಲ್ಲಿ ತೋರಿಸಿದ್ದನಲ್ಲ, ಅದಕ್ಕೇ ನಾನೂ ಅವನ ಇತಿ ವೃತ್ತಾಂತವನ್ನು ತೆರೆದಿಟ್ಟೆ – ಮೂವತ್ತು ವರ್ಷಗಳ ಹಿಂದೆ ಇವನು ಹುಟ್ಟಿದಾಗ